International Journal of Kannada Research
www.kannadajournal.com

ISSN: 2454–5813
IJKR 2020; 6(1): 43-46
© 2020 IJKR
www.kannadajournal.com
Received: 28-11-2019
Accepted: 30-12-2019

**ವಿರೇಶ ಅಮರಯ್ಯ**
ಸಂಶೋಧನಾ ವಿಧ್ಯಾರ್ಥಿ
ತತ್ವಶಾಸ್ತ್ರ ಅಧ್ಯಯನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ- 580 003

**ಡಾ. ಬಿ ಮಹಾದೇವಯ್ಯ**
ಸಂಶೋಧನಾ ಮಾರ್ಗದರ್ಶಕರು
ತತ್ವಶಾಸ್ತ್ರ ಅಧ್ಯಯನ ವಿಭಾಗ,
ಕರ್ನಾಟಕ ಮಹಾವಿದ್ಯಾಲಯ,
ಧಾರವಾಡ – 580 001

**Corresponding Author:**
**ವಿರೇಶ ಅಮರಯ್ಯ**
ಸಂಶೋಧನಾ ವಿಧ್ಯಾರ್ಥಿ
ತತ್ವಶಾಸ್ತ್ರ ಅಧ್ಯಯನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ- 580 003

# ಕನಕದಾಸರ ದೃಷ್ಟಿಯಲ್ಲಿ ಮೌಲ್ಯಗಳು

**ವಿರೇಶ ಅಮರಯ್ಯ, ಡಾ. ಬಿ ಮಹಾದೇವಯ್ಯ**

**ಸಂಶೋಧನಾ ಲೇಖನದ ಸಾರಾಂಶ**
ಕನಕದಾಸರು ಹಾವೇರಿ ಜಿಲ್ಲೆಯ ಬಾಡ ಗ್ರಾಮದಲ್ಲಿ ಜನಿಸಿದರು. ಇವರು ಕನಾಟಕದಲ್ಲಿ ೧೫–೧೬ ನೆಯ ಶತಮಾನದಲ್ಲಿ ಜನಪ್ರಿಯವಾದ ಭಕ್ತಿಪಂಥದ ಮುಖ್ಯ ಹರಿದಾಸರಲ್ಲಿ ಒಬ್ಬರು. ದಾಸ ಪರಪಂಪರೆಯಲ್ಲಿ ಬರುವ ೨೫೦ಕ್ಕೂ ಹೆಚ್ಚು ದಾಸರಲ್ಲಿ ಕನಕದಾಸರೊಬ್ಬರೇ ಶೂದ್ರದಾಸರು. ದಂಡನಾಯಕರಾಗಿದ್ದಾಗ ಯುದ್ಧವೊಂದರಲ್ಲಿ ಸೋತು ವೈರಾಗ್ಯ ಉಂಟಾಗಿ ಕಾಗಿನೆಲೆಯ ಅದಿಕೇಶವನ ಸೇವಕನಾಗಿ, ಶ್ರೀ ವ್ಯಾಸರಾಯರನ್ನು ಗುರುಗಳನ್ನಾಗಿ ಸ್ವೀಕರಿಸಿದರು. ಆಧ್ಯಾತ್ಮದಕಡೆ ಮುಖ ಮಾಡಿದ ಇವರು ಜಾತಿ ಪದ್ಧತಿಯ ತಾರತಮ್ಯಗಳನ್ನು ಅಲ್ಲಗಳೆದರು. ಸಮಾಜದಲ್ಲಿ ನೆಮ್ಮದಿಯಿಂದ ಬದುಕಲು ನೈತಿಕ ಮೌಲ್ಯಗಳಾದ ತಾತ್ವಿಕತೆ, ಆಧ್ಯಾತ್ಮಿಕ ಆದರ್ಶಗಳ ಮಖಾಂತರ ಸಂದೇಶ ನೀಡಿದರು. ಈ ಜಗತ್ತೀನಲ್ಲಿ ಬದುಕುವ ನೀತಿಯನ್ನು ನಾನಾ ಮುಖವಾಗಿ ವಿವರಿಸಿದ್ದಾರೆ. ಲೋಕನೀತಿಯು ಖಂಡಿತವಾಗಿಯೂ. ಅನುಭವ ಪೂರ್ಣವಾಗಿಯೂ, ಲೋಕಹಿತ ದೃಷ್ಟಿಯಿಂದ ನುಡಿದದ್ದು ಆಗಿದೆ. ಜೀವನರಹಸ್ಯವನ್ನೇ ಇದರಲ್ಲಿ ಅವರು ಹೊರಹಾಕಿದ್ದಾರೆ. ಪ್ರಸ್ತುತ ಸಮಾಜಕ್ಕೆ ಇವರ ಮೌಲ್ಯಯುತ ಚಿಂತನೆಗಳನ್ನು ಅಳವಡಿಕೊಳ್ಳುವುದು ಅವಶ್ಯಕವಾಗಿದೆ.

**ಕೀವರ್ಡ್ಸ್:** ಕನಕದಾಸರು, ಕೀರ್ತನೆಗಳು, ತಾತ್ವಿಕ, ನೈತಿಕ, ಸಾಮಾಜಿಕ, ಆಧ್ಯಾತ್ಮಿಕ ಮೌಲ್ಯಗಳು

## ಪೀಠಿಕೆ

ದಾಸರು ಭಗವಂತನ ಮಹಿಮಾ ವರ್ಣನೆ, ಭಗವಂತನ ಕೊಂಡಾಡುವ ಜೀವರ ಸಾಧನ ಈ ವಿಷಯಗಳನ್ನು ತಿಳಿಸಿರುವರು. ಸಕಲಜೀವರು ಶ್ರೀಹರಿಯ ದಾಸರೇನಿಸಬಹುದಾದರೂ, ವಿಶೇಷವಾಗಿ ದಾರ್ಶನಿಕ ಪರಿಕಲ್ಪನೆಯ ವ್ಯಾಪ್ತಿಗೆ ಒಳಗೊಂಡು ತಾತ್ವಿಕವಾಗಿ, ಸಕಲ ಜೀವರಾಶಿ ಈಶ್ವರನ ಅಧಿನವೆಂಬ ನೀತಿ, ಸತ್ಯ ತತ್ವಗಳನ್ನು ಅರಿತು ಅನುಸರಿಸಿ ಅದರಂತೆ ಅನುಷ್ಠಾನ ಗೈಯುವವನೆ ನಿಜವಾದ ದಾಸ. ಪ್ರಪಂಚದಲ್ಲಿ ವೈರಾಗ್ಯದ ಜೊತೆಗೆ ಭಕ್ತಿಪೂರಿತನಾಗಿ ತನ್ನ ಜೀವನ ಸರ್ವಸ್ವವನ್ನು ಸರ್ವೇಶನಿಗೆ ಸಮರ್ಪಿಸುವವನೆ ದಾಸನೇನಿಸುತ್ತಾನೆ. ವ್ಯಕ್ತಿಯ ವಕ್ತಿತ್ವಗಳು ಮಾನವ ಸಮಾಜಕ್ಕೆ ಮಾತ್ರ ಸೀಮಿತವಾಗಿಲ್ಲ. ಸಮಸ್ತ ಜೀವ ಜಗತ್ತಿಗೂ ಅದು ವ್ಯಾಪಿಸಿದೆ. 'ನೆರೆಹೊರೆಯವರನ್ನು ನಿನ್ನಂತೇಯೆ ಪ್ರೀತಿಸು ಹೀಯಾಳಿಸಬೇಡ, ಎಂಬ ಸಾಮಾನ್ಯ ಮಾತಿನ ಅರ್ಥದ ಮೂಲಕ ಪ್ರತಿಯೊಂದು ಜೀವಿಯು ನಿನ್ನ ಆತ್ಮೀಯ ಜೀವ ಎಂಬುದನ್ನು ಪರಿಗಣಿಸುತ್ತದೆ.

ದಾಸರಲ್ಲಿ ಶ್ರೇಷ್ಠರಾದವರು ಕನಕದಾಸರೊಬ್ಬರಾಗಿದ್ದು, ಅವರ ಆದರ್ಶಗಳನ್ನು ಸಮಾಜದ ಜನ ಅನುಸರಿಸಿದಾಗ ನೈತಿಕ ಮೌಲ್ಯಗಳು ಹೆಚ್ಚುತ್ತವೆ. ಮಹಾತ್ಮರ ಆದರ್ಶಗಳನ್ನು ನಾವು ನಮ್ಮ ಜೀವನದಲ್ಲಿ ಆಳವಡಿಸಿಕೊಂಡಾಗ ಅದಕ್ಕೆ ಮಹತ್ವ ಬರುತ್ತದೆ. ಇವರ ಆದರ್ಶಗಳು ಜನಸಾಮಾನ್ಯರಿಗೆ ತಿಳಿಸುವುದು ಸೇರಿದಂತೆ ಸಾಮಾಜಿಕ ನ್ಯಾಯಕ್ಕಾಗಿ ಇವರ ಮೌಲ್ಯಗಳು ಮಹತ್ವ ಪಡೆದಿವೆ. ಕನಕದಾಸರ ಚಿಂತನೆ, ಆದರ್ಶಗಳು, ಕೇವಲ ಒಂದು ಜನಾಂಗಕ್ಕೆ ಸೀಮಿತವಾಗದೇ ಅದು ಎಲ್ಲ ಸಮುದಾಯಗಳ ನಡುವಿನ ಸಮಾನತೆ, ಭ್ರಾತೃತ್ವವನ್ನು ಸಾರಿದ ಅವರ ಮೌಲ್ಯಗಳನ್ನು ಸರಿಯಾದ ರೀತಿಯಲ್ಲಿ ಅರ್ಥೈಸಿಕೊಳ್ಳಬೇಕಿದೆ. ಸಮಾಜದಲ್ಲಿನ ಅಸಮಾನತೆ ಅಂದಕಾರವನ್ನು ತೊಡೆದುಹಾಕುವಲ್ಲಿ ಶ್ರಮಿಸಿದ ಅನೇಕ ಮಹಾತ್ಮರ ಸಾಲಿನಲ್ಲಿ ಕನಕದಾಸರೂ ಕೂಡ ಒಬ್ಬರು. ತಮ್ಮ ತತ್ವಚಿಂತನೆಗಳನ್ನು ಕೀರ್ತನೆಗಳ ಮೂಲಕ ಹರಿಯಬಿಟ್ಟ ಕನಕದಾಸರು ಇವತ್ತಿಗೂ ಪ್ರಸ್ತುತರಾಗಿದ್ದು, ಅವರು ಪ್ರತಿಪಾದಿಸಿದ ಸಾಮಾಜಿಕ, ಧಾರ್ಮಿಕ, ನೈತಿಕ, ಆಧ್ಯಾತ್ಮಿಕ ಮೌಲ್ಯಗಳನ್ನು ಪಾಲಿಸಬೇಕಾದದ್ದು ಇಂದಿನ ಪಿಳಿಗೇಯ ಕರ್ತವ್ಯವಾಗಿದೆ. ಜಾತಿ, ಮತ ಅಳಿಸಲು ಆಧ್ಯಾತ್ಮಕವಾಗಿ ಸಮಾಜದ ಒಳಿತಿಗಾಗಿ ತತ್ವಪದಗಳ ಮೂಲಕ ಇವರ ಆದರ್ಶಗಳು

ಸರ್ವವ್ಯಾಪಿಯಾಗಿದೆ. ಸಮಾಜದಲ್ಲಿ ಹುಟ್ಟಿದ ಪ್ರತಿಯೊಬ್ಬರು ಭಗವಂತನ ಪ್ರೇರಣೆಗೆ ಪಾತ್ರರಾಗಬೇಕು. ಇಲ್ಲಿ ಹಣ, ಆಸ್ತಿ, ದ್ವಂದ್ವಚಾರ, ಆಡಂಬರವನ್ನು ಬಿಟ್ಟು ಸಮಾಜಮುಖಿಯಾಗಿ ಬದುಕಬೇಕು. ಇಲ್ಲದೆ ಜಾತಿ ಮತ ತಾರತಮ್ಯ ಹೆಚ್ಚಿದಾಗ ದೃತಿಗೆಡದೆ ವ್ಯಾಸರಾಯರಿಂದ ದೀಕ್ಷೆ ಪಡೆದ ಕನಕದಾಸರು ಭಕ್ತಿಯೆಡೆಗೆ ಆದ್ಯತೆಕೊಟ್ಟು ನಿರಂತರವಾಗಿ ತಾತ್ವಿಕಲೋಕಕ್ಕೆ ಜೀವತುಂಬಿದರು. ಕೊಳಕುಮೈದುಂಬಿದ ಬುದ್ದಿಜೀವಿಗಳನ್ನು ದೂರಮಾಡಲು ಭಕ್ತಿ ಸಾಮಾರಸ್ಯದಿಂದ ಆಧ್ಯಾತ್ಮಿಕತೆಗೆ ಸಾಮಾಜಿಕವಾಗಿ ಜನರು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಹೀಗೆ ತಿಳಿಸಿ ಹೇಳಲು ಕೀರ್ತನೆಗಳನ್ನು ಪ್ರಾರಂಭಿಸಿದರು. ಕನಕದಾಸರು ತಮ್ಮ ಬದುಕು ಹಾಗೂ ಬರಹಗಳ ಮೂಲಕ ಪ್ರತಿಪಾದಿಸಿದ ಜೀವನ ಪರವಾದ ನೈತಿಕ ಮೌಲ್ಯಗಳು ಇಂದಿಗೂ ಮಹತ್ವ ಪಡೆದಿವೆ. ಮಾನವೀಯ ಮೌಲ್ಯಗಳನ್ನು ವಿಭಿನ್ನ ರೀತಿಯಲ್ಲಿ ಸಾರಿದ ಅವರ ಕೀರ್ತನೆಗಳು, ಕಾವ್ಯಗಳು, ಮುಂಡಿಗೆಗಳು, ಉಗಾಭೋಗ ಹಾಗೂ ಸುಳಾದಿಗಳು ಧಾರ್ಮಿಕತೆಗೆ ಸಹಮತದ ರೂಪಕವಾಗಿವೆ.

**ಸಾಮಾಜಿಕ ಮೌಲ್ಯಗಳು**

ಮಾನವ ಮೂಲತಃ ಸಂಘ ಜೀವಿ, ಅವನು ಬದುಕಲು ಜೀವನ ನಿರ್ಮಿಸಿಕೊಂಡ ಜನಸಮೂಹ, ಸಂಘ ಸಮುದಾಯಗಳೇ ಸಮಾಜ. ಈ ಸಮಾಜದಲ್ಲಿ ದಿನನಿತ್ಯದ ಬದುಕಿನ ಆಗು ಹೋಗುಗಳು ಅವನ ಅರಿವಿನ ಮೂಲಕ ನಡೆಯುತ್ತವೆ. ಅಂದರೆ ಸಮಕಾಲಿನ ಜನಾಂಗದ ಜೀವನ ಚಿತ್ರಣವೇ ಸಂಸ್ಕೃತಿ. ಈ ತಾತ್ವಿಕ ವಲಯದಲ್ಲಿ ಸಾಮಾಜಿಕ ಅರಿವಿಗೆ ಹೆಚ್ಚು ಪ್ರಾಶಸ್ತ್ಯ ದೊರಕಿತು. ಸಮಕಾಲಿನ ಸಮಾಜಕ್ಕೆ ಬೇಕಾಗುವ ನೈತಿಕ ಮೌಲ್ಯಗಳನ್ನು ಕನಕದಾಸರು ತಮ್ಮ ಕೃತಿಗಳ ಮೂಲಕ ಬಿಂಬಿಸಿ ಸಮಾಜದ ಸ್ವಾಸ್ತ್ಯವನ್ನು ಕಾಪಾಡಲು ಶ್ರಮಿಸಿದ್ದಾರೆ. ತಾತ್ವಿಕವಾಗಿ, ನೈತಿಕ ಮೌಲ್ಯಗಳನ್ನು ಜನ ಸಾಮಾನ್ಯರಿಗೆ ತಿಳಿಯುವಂತೆ ಮಾಡಿದವರು ಕನಕದಾಸರು.

ಅಂದಿನ ಜನರ ಜೀವನದಲ್ಲಿ ಜಾತಿಯತೆ ತುಂಬಿ ತುಳುಕುತ್ತಿತ್ತು ಮೇಲು ಕೀಳೆಂಬ ತಾರತಮ್ಯ ಭಾವನೆ ತುಂಬಿದ ಸಮಾಜವನ್ನು ಕಂಡ ಕನಕದಾಸರು ಪ್ರತ್ಯಕ್ಷ ತಮ್ಮ ಜೀವನದಲ್ಲಿ ಅನುಭವಿಸಿದ ಅಳಲನ್ನು ತೋಡಿಕೊಂಡಿದ್ದಾರೆ.

> ಕುಲಕುಲವೆಂದು ಹೊಡೆದಾಡದಿರಿ ನಿಮ್ಮ
> ಕುಲದ ನೆಲೆಯನೇನಾದರೂ ಬಲ್ಲಿರಾ ॥ ಪ ॥
> ಹುಟ್ಟಿದ ಯೋನಿಗಳಿಗಿಲ್ಲ ಮೆಟ್ಟಿದ ಭೂಮಿಗಳಿಲ್ಲ
> ಅಟ್ಟು ಉಣ್ಣದ ವಸ್ತುಗಳಿಲ್ಲ
> ಗುಟ್ಟು ಕಾಣಿಸಬಂತು ಹಿರಿದೇನು ಕಿರಿದೇನು
> ನೆಟ್ಟನೆ ಸರ್ವಜ್ಞನ ನೇನೆಕಂಡೆ ಮನುಜ ॥ 1 ॥
> ಜಲವೇ ಸಕಲ ಕುಲಕ್ಕೆ ತಾಯಿಯಲ್ಲವೇ
> ಜಲದ ಕುಲವೇನಾದರು ಬಲ್ಲಿರಾ
> ಜಲದ ಬೊಬ್ಬುಳಿಯಂತೆ ಸ್ತಿರವಲ್ಲವೀ ದೇಹ
> ನೆಲೆಯನರಿತು ನೀ ನೆನೆ ಕಂಡ್ಯ ಮನುಜ ॥ 2 ॥
> ಹರಿಯೇ ಸರ್ವೋತ್ತಮನು ಹರಿಯೇ ಸರ್ವೇಶ್ವರ
> ಹರಿಮಯವೆಲ್ಲ ವೆನುತ ತಿಳಿದು
> ಸಿರಿ ಕಾಗಿ ನೆಲೆಯಾದಿಕೇಶವರಾಯನ
> ಚರಣಕಮಲವ ಕೀರ್ತಿಸುವನೇ ಕುಲಜ ॥3॥

ಕನಕದಾಸರು ಸಾಮಾಜಿಕ ಚಿತ್ರಣವನ್ನು ಸೋಗಸಾಗಿ ಕಟ್ಟಿಕೊಂಡಿದ್ದಾರೆ. ಇದು ಅದುನಿಕ ಸಮಾಜದ ದಿಗ್ದರ್ಶನವಾಗಿದೆ. ‘ಏನು ಬರುವುದೋ ಸಂಗಡ, ಸಾಯುವಾಗ ಒಯ್ಯಲಿಲ್ಲ’ ಹೀಗೆ ಭೂಮಿ ಸಂಪತ್ತಿನ ಗಳಿಕೆ ಪಾಪದ ರಾಶಿಗಳೆಂದೇ ಸಾರಿದ್ದಾರೆ. ಪರೋಪಕಾರ ಗೈದು ಪುಣ್ಯ ಸಂಪಾದಿಸಿರಿ ಎಂಬುದೇ ಅವರ ಆಶಯ. ದಾನದಲ್ಲಿ ವ್ಯಕ್ತಿ ಹಾಗೂ ಲೋಕದ ಹಿತ ಅಡಗಿದೆ. ಗಳಿಗೆ ತರವಲ್ಲ, ಅಜ್ಞಾನ, ಆಸ್ತಿ, ಉದ್ಯೋಗದ ಗೌರವ, ಸಂಪತ್ತಿನ ಕ್ರೂಡಿಕರಣವೇ ಸಾಮಾಜದ ಅಸಮಾನತೆಗೆ ಕಾರಣವಾಗಿದೆ. ಪ್ರಸ್ತುತ ಸಮಾಜದಲ್ಲಿ ಅಸಮನತೆ ಮುಳುಗಿದ ಕಾರಣ ಸಂಘರ್ಷಗಳುಂಟಾಗುತ್ತವೆ. ಅಸಮಾನತೆಯ ನಿವಾರಣೆಗೆ, ಪ್ರೀತಿವಿಶ್ವಾಸ, ಪರಸ್ಪರ ಹೊಂದಾಣಿಕೆ, ಜ್ಞಾನ, ಉದ್ಯೋಗ, ವೃತ್ತಿ ಗೌರವ, ಸಂಪತ್ತಿನ ಹಂಚಿಕೆಗಳು ಆಗಬೇಕಾಗಿದೆ. ಇಂತಹ ಸಂದರ್ಭದಲ್ಲಿ ಕನಕದಾಸರು ಸಾಮಾಜಿಕ ಅಂತಃಕರಣಕ್ರೀಯೆಯ ಮೂಲಕ ಹರಿದಾಸರಲ್ಲಿ ಒಬ್ಬರಾಗಿ ಸಾಮಾಜಿಕ ಚಿಂತನೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಇನ್ನೂ ನಮ್ಮ ಜೀವನ ಮೌಲ್ಯಗಳಾಗಿರುವ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಇವುಗಳನ್ನು ದರ್ಶನದ ಮುಖ್ಯ ನೆಲೆಯಲ್ಲಿ ಬೋಧಿಸಲಾಗಿದೆ. ಧರ್ಮದ ಮುಖ್ಯ ಗುರಿ ಮಾನವನ ಅರಿಷಡ್ವರ್ಗಗಳನ್ನು ಸಂಸ್ಕರಿಸುವುದು ಮಾತ್ರವಲ್ಲ, ಅವುಗಳನ್ನು ಉದಾತ್ತಗೊಳಿಸಿ ಇಡೀ ಜೀವನವನ್ನು ಪರಿವರ್ತಿಸುವುದಾಗಿದೆ. ವೇದಗಳು, ಉಪನಿಷತ್ತುಗಳು, ಪುರಾಣಗಳು, ಗ್ರಂಥಗಳು, ಭಗವದ್ಗೀತೆ, ರಾಮಾಯಣ, ಮಹಾಭಾರತ ದರ್ಶನಗಳೆಲ್ಲ ಮುಖ್ಯವಾಗಿ ಮನುಷ್ಯನಲ್ಲಿ ಆಶಾವಾದವನ್ನು ಪ್ರಚೋದಿಸುವುದಾಗಿದ್ದವು. ಮರಣಾನಂತರ ಸಜ್ಜನರಿಗೆ ಕಾದಿರುವ ವೈಭವಗಳನ್ನು ಮಾತ್ರ ಋಗ್ವೇದದಲ್ಲಿ ಹೇಳಲಾಗಿದೆ. ಇದೇ ದೃಷ್ಟಿಯು ಮುಂದೆ ಬ್ರಾಹ್ಮಣಕಗಳಲ್ಲಿಯೂ ಬಿಂಬಿತವಾಯಿತು. ಒಟ್ಟಾರೆ ಭಾರತೀಯ ನೈತಿಕ ಮೌಲ್ಯಗಳ ವ್ಯವಸ್ಥೆಯಲ್ಲಿ ಆಶಾವಾದ ಒಂದು ಮುಖ್ಯವಾದ ವಿಚಾರ. ಮೋಕ್ಷಕ್ಕೆ ಜೀವನ ಬಗೆಗಿನ ಆಶಾವಾದ ಮತ್ತು ಮಾನವ ಕಲ್ಯಾಣದ ಪೂರ್ಣ ಜೀವನದ ಆದರ್ಶವನ್ನೇ ನಮ್ಮ ಪರಂಪರೆಯಲ್ಲಿ ಬಿಂಬಿಸಿದೆ ಎಂಬುದು ಪ್ರಾಚೀನ ವೇದಾಂತಗಳ ಮುಖ್ಯ ವಿಚಾರವಾಗಿದೆ. ಮಾನವನ ಜೀವನದ ಗುರಿಯಾಗಿರುವ ನೈತಿಕ ಮೌಲ್ಯಗಳು ಯಾವುವು? ಅವುಗಳು ಮಿತಾಹಾರ, ಧೈರ್ಯ, ವಿವೇಕ, ನ್ಯಾಯ, ಪ್ರೇಮ ಮತ್ತು ಸಹಕಾರಗಳಂತಹ ಕೇವಲ ಸದ್ಗುಣಗಳಲ್ಲ; ಸಮಾನತೆ ಮತ್ತು ಸದವಕಾಶಗಳಂತಹ ಆದರ್ಶಗಳನ್ನು ನಮ್ಮ ದೃಷ್ಠಿ ಮತ್ತು ಯುಕ್ತಾಯುಕ್ತ ಪರಿಜ್ಞಾನಗಳಿಗೆ ಅನುಸಾರವಾಗಿ, ನಮ್ಮ ನೈತಿಕ ಗುರಿ ಅಥವಾ ಅತ್ಯುನ್ನತ ಶುಭಕಾಂಕ್ಷೆಗಳನ್ನು ಆಧಾರವಾಗಿಟ್ಟುಕೊಂಡು ನಿರ್ಧರಿಸಬೇಕಾಗಿದೆ.

ಜೆ.ಎಸ್.ಮಿಲ್ “ತೃಪ್ತ ಹಂದಿಗಿಂತ ಅತೃಪ್ತ ಮಾನವನಾಗಿರುವುದು ಉತ್ತಮ; ತೃಪ್ತ ಮೂರ್ಖನಿಗಿಂತ ಅತೃಪ್ತ ಸಾಕ್ರೆಟೀಸ್ ಆಗುವುದು ಉತ್ತಮ. ಕೇವಲ ಆಸೆ ಅಥವಾ ಸುಖದ ತೃಪ್ತಿಗಿಂತಲೂ ಸೇವೆ ಮತ್ತು ತ್ಯಾಗ ಜೀವನ ಮೌಲ್ಯಗಳು ಹೆಚ್ಚು ಮಹತ್ವದವುಗಳಾಗಿವೆ”[1] ಹಾಗಿದ್ದಲ್ಲಿ ಒಳ್ಳೆಯ ಜೀವನವೆಂದರೇನು? ಅದು ಎಲ್ಲರ ಅತ್ಯುನ್ನತ ಹಿತದ ಪರಿಕಲ್ಪನೆಯೊಂದಿಗೆ ಎಲ್ಲರಿಗೂ ಒಪ್ಪಿಗೆಯಾಗುವ ರೀತಿಯಲ್ಲಿ ಬದುಕುವುದಾಗಿದೆ. ಪ್ಲೇಟೋನ ಪ್ರಕಾರ ಮಾನವನ ಅತ್ಯುನ್ನತ ಹಿತವು ಸಮರಸವಾಗಿ ವಿಕಾಸಗೊಂಡ ವ್ಯಕ್ತಿತ್ವವಾಗಿದೆ. ಪ್ರತಿಯೊಂದು ಸಾಮರ್ಥ್ಯವು ಬೇರೆ ಯಾವುದೇ ಸಾಮರ್ಥ್ಯವನ್ನು ಅತಿಕ್ರಮಿಸದೆ ಪರಿಪೂರ್ಣವಾದ ರೀತಿಯಲ್ಲಿ ಸಹಕರಿಸಿ ಕಾರ್ಯನಡೆಸುವ ಸ್ಥಿತಿಯಾಗಿದೆ. ಯಾವ ವ್ಯಕ್ತಿಯಲ್ಲಿ ಹಸಿವು, ವಿವೇಚನೆ ಮತ್ತು ಧೈರ್ಯಗಳು, ಆತ್ಮವಿಶ್ವಾಸಗಳು ತಮ್ಮ ಪೈಕಿ ಯಾವುದೂ ಅಧಿಕವಾಗಿರದ ರೀತಿಯಲ್ಲಿ ಸಾಮರಸ್ಯದಲ್ಲಿ ಕೆಲಸ ಮಾಡುವನೋ ಅಂತಹ ವ್ಯಕ್ತಿಯು ಒಳ್ಳೆಯವನೆನಿಸಿಕೊಳ್ಳುವನು. ನಮ್ಮ ಅತ್ಯುನ್ನತ ಶಕ್ತಿಗಳ ಸಹಜ ಸ್ಥಿತಿಯ ಚಟುವಟಿಕೆಯಲ್ಲಿ

ಅತ್ಯುನ್ನತ ಹಿತವು ಕಂಡು ಬರುವುದೆಂದು ಪ್ಲೇಟೋವಿನ ಶಿಷ್ಯನಾದ ಅರಿಸ್ಟಾಟಲನ ಅಭಿಪ್ರಾಯವಾಗಿದೆ. ಅವನ ಪ್ರಕಾರ ಮಾನವನ ಅತ್ಯುನ್ನತ ಚಟುವಟಿಕೆ ಎಂದರೆ ಜ್ಞಾನ. ಅದುದರಿಂದ ವೈಜ್ಞಾನಿಕಸಂಶೋಧನೆಯಲ್ಲಿ, ದಾರ್ಶನಿಕ ವಿವೇಚನೆಯಲ್ಲಿ, ಸತ್ಯಾನ್ವೇಷಣೆಯಲ್ಲಿ ವ್ಯಕ್ತವಾಗುವ ತರ್ಕಸಮ್ಮತ ವಿಚಾರ ಪೂರ್ಣ ಚಟುವಟಿಕೆಯು ಅರಿಸ್ಟಾಟಲನ ಅತ್ಯುನ್ನತ ಹಿತದ ಕಲ್ಪನೆಯಾಗಿದೆ.

**1. ವಚನ ಸಾಹಿತ್ಯ ಮಾನವೀಯ ಮೌಲ್ಯಗಳು ಮೂಲ, ಡಾ.ಸಿದ್ದಯ್ಯ ಪುರಾಣಿಕ, ಅನು – ಪ್ರೊ ಎ.ಎಸ್. ನಂಜುಂಡಸ್ವಾಮಿ ಭಾರತೀಯ ವಿದ್ಯಾಭವನ ಬೆಂಗಳೂರು–560001**

ಆದರೆ ಸೌಂದರ್ಯ ಮತ್ತು ಸೃಜನಾತ್ಮಕತೆಗಳತ್ತ ಮಾನವನಿಗೆ ಇರುವ ಉತ್ಕಟತನದ ಬಗೆಗೆ ಹೇಳುವುದೇನಿದೆ? ಸತ್ಯ, ಒಳ್ಳೆಯತನ ಮತ್ತು ಸೌಂದರ್ಯಗಳು ಅತ್ಯುನ್ನತ ಮೌಲ್ಯಗಳಾಗಿದ್ದರೆ ಮೌಲ್ಯಗಳ ಯಾವುದೇ ಶ್ರೇಣಿಯು ವ್ಯಕ್ತಿತ್ವ, ಒಳ್ಳೆಯ ಜೀವನ ಮತ್ತು ಆತ್ಮತೃಪ್ತಿಯ ಬೇಡಿಕೆಗಳನ್ನು ತೃಪ್ತಿಪಡಿಸಲು ಅತ್ಯುನ್ನತ ಮೌಲ್ಯಗಳ ಸಾಕ್ಷಾತ್ಕಾರಕ್ಕೆ ಅವಶ್ಯಕವಾದ ಸಾಮಾಜಿಕ ಮೌಲ್ಯಗಳನ್ನು ಒಳಗೊಂಡಿರುತ್ತದೆ.

**ನೈತಿಕ ಮೌಲ್ಯಗಳು**

ಕನಕದಾಸರ ನೀತಿಯನ್ನು ನೋಡುವಾಗ ಕೆಲವು ಅಂಶಗಳು ಹೊರಬರುವವು. ಮುಖ್ಯವಾಗಿ ಮನುಷ್ಯನು ದುರಾಚಾರಿಯಾಗಬಾರದು. ಪರಸ್ತ್ರೀಯರನ್ನು ಬಯಸಬಾರದು, ತನ್ನ ಹೆಂಡರು ಮಕ್ಕಳ ದಾಸನಾಗಬಾರದು, ಸಂಸಾರವೇ ಸರ್ವಸ್ವವೆಂದು ಮುಳುಗಬಾರದು, ಮಾತಪಿತೃಸೇವೆ ಮಾಡಬೇಕು. ಧಾನ ಧರ್ಮಗಳನ್ನು ಮಾಡಬೇಕು. ಎಲ್ಲದಕ್ಕಿಂತ ಮುಖ್ಯವಾಗಿ ಭಗವಂತನಲ್ಲಿ ಇರಬೇಕು, ಎಂಬ ಅಂಶಗಳನ್ನು ಪುನಃ ಪುನಃ ಒತ್ತಿ ಹೇಳತ್ತಾರೆ. ಇದಲ್ಲದೆ ಸ್ತ್ರೀಯರಿಗಾಗಿಯೇ ಕೇಲವು ಉಪದೇಶಗಳನ್ನು ಮಾಡಿರುತ್ತಾರೆ. ತಾಳ್ಮೆ ಮುಂತಾದ ಗುಣಗಳನ್ನು ಪ್ರತ್ಯೇಕವಾಗಿ ಬಣ್ಣಿಸಿದ್ದಾರೆ. ಇದಷ್ಟೇ ಅಲ್ಲ ಲೋಕಧರ್ಮಗಳನ್ನು ಬಿಚ್ಚಿ ತೋರಿಸಿದ್ದಾರೆ. ಹೀಗೆ ದಾಸರ ಉಪದೇಶ ಲೋಕನೀತಿಯ ವಿಷಯದಲ್ಲಿ ಸರ್ವವನ್ನು ತೆಗೆದುಕೊಂಡು ಸಾಗಿದೆ. ಇವು ಬೋಧನೆಯಾಗದೆ ಅತ್ಯಂತ ಮಹತ್ವವು ಆಗಿದೆ.

> "'ಕಲಿಯುಗದ ಮಹಿಮೆಯನು ಕಂಡಷ್ಟು ಪೇಳುವೆನು
> ಕಮಲನಾಭನ ಕೃಪೆಯ ಪಡೆದವರು ಕೇಳಿ,

'ಸತ್ಯ ಧರ್ಮಗಳೆಲ್ಲ ಎತ್ತ ಪೋದವೋ ಕಾಣೆ ಉತ್ತಮರ ಜೀವನಕೆ ದಾರಿಯಿಲ್ಲ । ನಿತ್ಯದಲಿ ಕಳವು ವ್ಯಭಿಚಾರ ಉಳ್ಳವರೆಲ್ಲ ಅರ್ಥ ಸಂಪನ್ನ ರಾಗ್ಯನುಭವಿಸುತಿಹರು,"2

"ಕೇಶವನೊಲುಮೆಯು ಆಗುವತನಕ ಹರಿದಾಸರೊಳಿರು ಮನವೆ । ಪ ।

ನ್ಯಾಯವ ಬಿಟ್ಟ ನ್ಯಾಯವ ಪೇಳುವ ನಾಯಿಗೆ ನರಕವು ತಪ್ಪೀತೆ
ಬಾಯಿಕೊಬ್ಬಿನಲ್ಲಿ ಬೈಯುವ ಮನುಜಗೆ ಘಾಯವಾಗದೆ ಬಿಟ್ಟೀತೆ
ತಾಯಿತಂದೆಯರ ನೋಯಿಸಿದವನಿಗೆ ಮಾಯದ ಮರಣವು ತಪ್ಪೀತೆ

**2. ಕರ್ನಾಟಕದ ಹರಿದಾಸರು (ವಿಮರ್ಶಾತ್ಮಕ ಅಧ್ಯಯನ), ಎಚ್ ಕೆ ವೇದವ್ಯಾಸಾಚಾರ್ಯ. ಪು ಸಂ. 593**

ಮಾಯಾಜಾಲವ ಕಲಿತ ಮನುಜಗೆ ಕಾಯ ಕಷ್ಟವು ಬಿಟ್ಟೀತೆ
ಜೇಣನ ವಶದೊಳು ನಾನಾ ದ್ರವ್ಯವಿರೆ ದಾನ ಧರ್ಮಕೆ ಮನಸಾದೀತೆ ಹೀನ ಮನುಜನಿಗೆ ಜ್ಞಾನವ ಬೋದಿಸೆ ಹೀನ ವಿಷಯವಳಿದ್ದೋದೀತೇ ಮಾನಿನಿ ಮನ ಸಧಾನವಿಲ್ಲದಿರೆ ಮಾನಾಭಿಮಾನಗಳುಳಿದೀತೆ ಭಾನು ಪ್ರಕಾಶನ ಭಜನೆಯ ಮಾಡದ ಹೀನಗೆ ಮುಕುತಿಯು ದೊರೆದೀತೆ"3

ವ್ಯಕ್ತಿಯ ಕರ್ತವ್ಯಗಳು ಮಾನವ ಸಮಾಜಕ್ಕೆ ಮಾತ್ರ ಸೀಮಿತವಾಗದೇ ಸಮಸ್ತ ಜೀವ ಜಗತ್ತಿಗೂ ಅದು ವ್ಯಾಪ್ತಿಸಿದೆ. 'ನೆರೆಹೊರೆಯುವರನ್ನು ನಿನ್ನಂತೆಯೇ ಪ್ರೀತಿಸು, ಎಂಬ ಸಾಮಾನ್ಯ ಮಾತಿನ ಮೂಲಕಪ್ರತಿಯೊಂದು ಜೀವಿಯೂ ನಿನ್ನ ಸ್ನೇಹ ಜೀವಿಯಾಗಬೇಕು, ಎಂದು ಬಯಸುತ್ತದೆ. ನೀತಿಶಾಸ್ತ್ರವು ಸರಿ ಮತ್ತು ತಪ್ಪುಗಳ ಕುರಿತು ಒಳ್ಳೆಯ ಮತ್ತು ಕೆಟ್ಟದ್ದನ್ನು ಕುರಿತು ಅಧ್ಯಯನ ಮಾಡುತ್ತದೆ. ಮಾನವನ ನಡತೆ ವರ್ತನೆಗಳ ಸಂಬಂಧಗಳನ್ನು ಕುರಿತು ಅಧ್ಯಯನ ಮಾಡುವುದಾಗಿದೆ.

ಹಿಂದೂಗಳು ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ನಾಲ್ಕು ಬಗೆಯ ಪುರುಷಾರ್ಥಗಳನ್ನು ಜೀವನದ ಗುರಿಗಳೆಂದು ಒಪ್ಪಿಕೊಂಡಿದ್ದಾರೆ. ಇವುಗಳಿಂದ ಧಾರ್ಮಿಕ ಮೌಲ್ಯಗಳು, ಆರ್ಥಿಕ ಮೌಲ್ಯಗಳು, ಶಾರೀರಿಕ ಮೌಲ್ಯಗಳು ಮತ್ತು ಭೌದ್ಧಿಕ ಮೌಲ್ಯಗಳನ್ನು ಉದಾಹರಿಸಬಹುದು. ಮಾನವನ ಅತ್ಯುನ್ನತ ಗುರಿಯಾದ ಮೋಕ್ಷ (ಬಿಡುಗಡೆ) ಪಡೆದ ಮನಸ್ಸು ಮತ್ತು ವ್ಯಕ್ತಿತ್ವ ಪ್ರಾಪ್ತಿಯೇ ವಿನಾ ಮತ್ತೇನೂ ಅಲ್ಲ. ಒಟ್ಟಿನಲ್ಲಿ ನೈತಿಕಮೌಲ್ಯಗಳು ಅತ್ಯುನ್ನತ ಹಿತದ, ಇಲ್ಲವೆ ಜೀವನದ ನೈತಿಕ ಗುರಿಯ ಸಾಕ್ಷಾತ್ಕಾರಕ್ಕೆ ಅತ್ಯಾವಶ್ಯಕವಾದ ಅರ್ಹತೆಗಳಾಗಿವೆ. ಇವು ಎಂತಹ ಪರಮ ಶ್ರೇಷ್ಠ ಹಾಗೂ ಪ್ರಮುಖ ಅಂಶಗಳಾಗಿವೆಯೆಂದರೆ ನೀತಿಗಳ ಸಿದ್ಧಾಂತದ ಅಧ್ಯಯನವು ನಮ್ಮನ್ನು ನೈತಿಕಮೌಲ್ಯಗಳಿಗೆ ಜೀವನದ ಅತಿ ಉನ್ನತವಾದ ಮೌಲ್ಯಗಳಿಗೆ ಕೊಂಡೆಯ್ಯುತ್ತವೆ. ಭಾರತದಲ್ಲಿ ಅಲ್ಲದೇ ದೇಶಾದ್ಯಂತ ತತ್ವಶಾಸ್ತ್ರವು ಕೂಡ ಸಾರಭೂತವಾಗಿ ಮೌಲ್ಯಗಳ ವಿಮರ್ಶೆಯಾಗಿದೆ.

**3. ಕರ್ನಾಟಕದ ಹರಿದಾಸರು (ವಿಮರ್ಶಾತ್ಮಕ ಅಧ್ಯಯನ), ಎಚ್ ಕೆ ವೇದವ್ಯಾಸಾಚಾರ್ಯ. ಪು ಸಂ. 597**

ಒಳ್ಳೆಯದನ್ನು ಮಾತನಾಡು, ಒಳ್ಳೆಯದನ್ನೆ ನೋಡು, ಒಳ್ಳೆಯದನ್ನೇ ಕೇಳು ಎನ್ನುವುದು ನೈತಿಕ ಮೌಲ್ಯದ ಧ್ಯೇಯವಾಕ್ಯವಾಗಿ ಪರಿಣಮಿಸುತ್ತದೆ. ಉದಾತ್ತವಾದ, ಆದರ್ಶನೀಯವಾದ, ಗೌರವಯುತವಾದ ಬೆಲೆಯುಳ್ಳ ನೀತಿಯನ್ನು ಹಿರಿಯರು ಮೌಲ್ಯವನ್ನಾಗಿ ಸ್ವೀಕರಿಸಿದ್ದಾರೆ. ಈ ನೈತಿಕಮೌಲ್ಯವನ್ನು ವ್ಯಕ್ತಿ, ಸಮಾಜ, ಧರ್ಮ, ಜಗತ್ತು, ಆತ್ಮ ದೇವರುಗಳ ತತ್ವಗಳನ್ನಾಗಿ ರೂಪಿಸಲಾಗಿದೆ. ಜಗತ್ತಿನ ಯಾವೊಂದು ಧರ್ಮವೂ ಅನೀತಿಯನ್ನು ಭೋದಿಸುವುದಿಲ್ಲ. ಹಿಂದೂಧರ್ಮವು ಭಾವನಾತ್ಮಕ ಬಂಧುತ್ವವನ್ನು, ಕ್ರೈಸ್ತ ಧರ್ಮವು ಪ್ರೀತಿಯ ಅನುಕಂಪವನ್ನು, ಇಸ್ಲಾಂ ಧರ್ಮವು ಭ್ರಾತೃತ್ವ–ಸಹನೆಯನ್ನು ಮುಖ್ಯವಾಗಿ ತಾತ್ವಿಕ ಮೌಲ್ಯಗಳನ್ನಾಗಿ ಪ್ರಚುರಪಡಿಸಿವೆ. ಈ ಎಲ್ಲ ಧರ್ಮಗಳ ಸಾರವೆಂಬಂತೆಯೋ ಅಥವಾ ಭಿನ್ನವಾದ ಧರ್ಮವೆಂಬಂತೆ ಸರ್ವರೂ ಒಂದೇ ಎಂಬ 'ಮಾನವ ಧರ್ಮವು ರೂಪುಗೊಳ್ಳುವುದು. "ಉದಾತ್ತ ಮಾನವೀಯ ಮೌಲ್ಯಗಳ ತತ್ವಗಳಿಂದ 'ಮನುಷ್ಯ ಜಾತಿ ತಾನೊಂದೇ ವಲಂ' ಎಂಬ ವಾಕ್ಯವೇ ಮುಖ್ಯತತ್ವ, ಮಾನವೀಯ ಮೌಲ್ಯಗಳು ದೇಶ, ಕಾಲ ಮತ್ತು ದರ್ಮಾತೀತವಾದವುಗಳು, ಮಾನವನು ಜೀವಂತವಿರುವವರೆಗೂ ಮೌಲ್ಯಗಳು ಆಧಾರವಾಗಿರುತ್ತವೆ, ಇನ್ನೂ ಸದಾಶಿವ ಒಡೆಯರ್ ಅವರು ಈ ಮೌಲ್ಯಗಳನ್ನು ಆರು ರೀತಿಯಾಗಿ ವಿಂಗಡಿಸಿದ್ದಾರೆ".4

- ಮಾನಸಿಕ ಮೌಲ್ಯಗಳು– ಸತ್ಯ, ನ್ಯಾಯದೃಷ್ಟಿ, ಸಮಾನಭಾವ, ಕುತೂಹಲ ಬುದ್ಧಿ, ಅನ್ವೇಷಣೆಯ ಪ್ರವೃತ್ತಿ, ಸೃಜನಾತ್ಮಕತೆಯ ಸೌಖ್ಯ ಇತ್ಯಾದಿ.
- ಭಾವನಾತ್ಮಕ ಮೌಲ್ಯಗಳು – ಕರುಣೆ, ಸಹನೆ, ಧೈರ್ಯ,

ಸಹಾನುಭೂತಿ, ದೃಡತೆ, ಆತ್ಮಬಲ, ಸ್ನೇಹ, ಸಾಮರಸ್ಯ ಜೀವನ ಇತ್ಯಾದಿ.

- ಲಲಿತ ಕಲೆಗಳು, ಕರಕುಶಲ ಕಲೆಗಳು, ಚಿತ್ರಕಲೆ, ಶಿಲ್ಪಕಲೆ, ವಾಸ್ತುಶಿಲ್ಪ ಇವೆಲ್ಲಾ ಕಲಾದೃಷ್ಟಿಯ ಮೌಲ್ಯಗಳು– ಸೌಂದರ್ಯ, ಸೃಜನಾತ್ಮಕತೆಯನ್ನು ಹೊಂದಿವೆ.
- ನೈತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳು – ಪ್ರಾಮಾಣಿಕತೆ, ಪರೋಪಕಾರ, ಔದಾರ್ಯ, ನಿಸ್ವಾರ್ಥತೆ, ಕೃತಜ್ಞತೆ, ನಿಷ್ಠೆ, ಉತ್ಸಾಹ, ನಿಷ್ಕಲ್ಮಶ ಮನಸ್ಸು, ಸ್ವಾವಲಂಬನೆ, ಜ್ಯಾತ್ಯಾತೀತತೆ, ಸೌಜನ್ಯಯುತ ನಡುವಳಿಕೆ ಇತ್ಯಾದಿ.
- ದೈಹಿಕ ಮೌಲ್ಯಗಳು–ಆರೋಗ್ಯ, ಶಕ್ತಿ, ದೈಹಿಕ, ಚಪಲತೆ, ಸೌಂಧರ್ಯ, ಶುಚಿತ್ವ ಇತ್ಯಾದಿ

**4.ಸದಾಶಿವ ಒಡೆಯರ ಜೀವನದಲ್ಲಿ ಮಾನವೀಯ ಮೌಲ್ಯಗಳು 1990 ಪು–4**

ವಿಶ್ವವ್ಯಾಪ್ತಿ ಹಾಗೂ ಸಾರ್ವತ್ರಿಕ ಮೌಲ್ಯಗಳು ಪ್ರಪಂಚದಲ್ಲಿ ಶಾಂತಿ, ನೆಮ್ಮದಿ ಅಂತರಾಷ್ಟ್ರೀಯ ಸದ್ಭಾವನೆ ಹಾಗೂ ಮಾನವರ ಐಕ್ಯತೆ ಇವುಗಳಲ್ಲದೆ ಸ್ವಚ್ಛತೆ, ಸಮಯನಿಷ್ಠೆ, ಸಹಕಾರ, ಕರ್ತವ್ಯಪ್ರಜ್ಞೆ, ಸರಳ ಕಾಯಕ, ಶ್ರದ್ಧೆ, ದಯೆ, ಸ್ನೇಹಪರತೆ, ಸಮಾನತೆ, ಸಾಮಾಜಿಕ ನ್ಯಾಯ, ದೇಶಾಭಿಮಾನ, ವಿಶಾಲದೃಷ್ಟಿ ವಾತ್ಸಲ್ಯ, ವಿಧೇಯತೆ, ಕ್ಷಮಾಗುಣ ಹೀಗೆ ಒಟ್ಟು 80ಕ್ಕೂ ಹೆಚ್ಚು ಮೌಲ್ಯಗಳನ್ನು ಗುರುತಿಸಲಾಗಿದೆ. ಈ ರೀತಿಯಾಗಿ ವರ್ಗೀಕರಿಸಿ ನೋಡುವುದು ಕೂದಲನ್ನು ಸೀಳುವ ಕೆಲಸವಾಗುತ್ತದೆ. ಇವೆಲ್ಲವನ್ನು ಒಳಗೊಂಡಿರುವುದೇ 'ಮಾನವತಾವಾದವಾಗಿದೆ.'

ಕನಕದಾಸರು ಸಾರಿದ ಮೌಲ್ಯಗಳ ಸುಧೀರ್ಘ ವಿವರಣೆಯ ನೈತಿಕಮೌಲ್ಯಗಳು ಹಾಗೂ ದಾಸರ ಕುರಿತು ಮೌಲ್ಯಗಳು ಅವಶ್ಯಕ ವಿಚಾರಶೀಲತೆಗೂ, ಮೌಲ್ಯಗಳಿಗೂ ಬಹಳ ನಿಕಟ ಸಂಬಂಧ ಇದೆ. ಜೀವನದ ಗುಟ್ಟು ಮೌಲ್ಯಗಳ ಸಾಕ್ಷಾತ್ಕಾರದಲ್ಲಿ ಉಂಟು, ಎಂಬ ಅರಿವನ್ನು ಕೊಡುವುದೇ ವಿಚಾರಶೀಲತೆ, ಪುರುಷಾರ್ಥವೆಂದರೆ ಮಾನವನು ಸಾಧಿಸಲೇಬೇಕಾದ ಜೀವನದ ಆದರ್ಶಗಳು, ಮುಖ್ಯ ವಸ್ತುಗಳು, ಸತ್ಯ, ಸೌಂದರ್ಯ, ಸಾಹಸ, ಕಲೆ, ಶಾಂತಿ, ಅಹಿಂಸೆ, ಕರುಣೆ, ಪ್ರೀತಿ, ಧರ್ಮ, ಸಂಪತ್ತು ಮೋಕ್ಷ ಮೊದಲಾದವುಗಳು ಮೌಲ್ಯಗಳಿಗೆ ಹಲವು ಉದಾಹರಣೆಗಳಾಗಿರುತ್ತವೆ.

**ಉಪಸಂಹಾರ**

ಕನಕದಾಸರ ವಿಶಾಲದೃಷ್ಟಿ ಅವರನ್ನು ತಾತ್ವಿಕರ ಹಿರಿಯ ಪಂಕ್ತಿಯಲ್ಲಿ ಸೇರಿಸುತ್ತದೆ. ಅವರ ನೈತಿಕ ಮೌಲ್ಯಗಳು ಸಾರ್ವತ್ರೀಕವಾಗಿ ಬಂದಂತವು. ವಿಶ್ವದ ಬಗ್ಗೆ ಆಳವಾಗಿ ತಿಳಿದಿದ್ದ ಅವರ ನೈತಿಕ ಚಿಂತನೆಗಳು ಜಗತ್ತಿಗೆ ಪ್ರಸ್ತುತವೆನಿಸುತ್ತವೆ. ದ್ವೇಷಾಸೂಯೆ, ಸ್ವಾರ್ಥ ರಾಜಕೀಯ, ಅಪರಾದ, ಜಾತೀಯತೆ, ವೈರತ್ವ ಇವೆಲ್ಲ ನಾಶವಾಗಿ ಜನರಲ್ಲಿ ತೃಪ್ತಿ ಸಮಾಧಾನಗಳು, ಸಂತೋಷ ಆನಂದ ಕೂಡಿಬರಲು ಶಾಶ್ವತ ಹಾದಿಯನ್ನು ಹಿಡಿಯುವಂತಾಗಬೇಕು ಎಂಬುದೇ ಅವರ ಆಶಯವಾಗಿತ್ತು.

**ಆಕಾರ ಗ್ರಂಥಗಳು**

1. ಹರಿದಾಸರ ಭಕ್ತಿ ಸ್ವರೂಪ: ಟಿ ಎನ್ ನಾಗರತ್ನ, ಮೈಸೂರು ವಿ. ವಿ. ಪ್ರಸಾರಾಂಗ. 1986
2. ಕರ್ನಾಟಕದ ಹರಿದಾಸರು, (ವಿಮರ್ಶಾತ್ಮಕ ಅಧ್ಯಯನ) ಎಚ್. ಕೆ. ವೇದವ್ಯಾಸಾಚಾರ್ಯ, ಶ್ರೀ ಪರಿಮಳ ಸಂಶೋಧನ ಮತ್ತು ಪ್ರಕಾಶನ ಮಂದಿರ ನಂಜನಗೂಡು. 1965
3. ಕನಕಸಾಹಿತ್ಯ ದರ್ಶನ, ಸಂಪುಟ–1 ದೇಜಗೌ ಹಿಂಧೂಧರ್ಮದ ಪರಿಚಯ, ಎದುರ್ಕಳ. ಕೆ ಶಂಕರನಾರಾಯಣ ಭಟ್
4. ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು, ಪ್ರೊ. ಸುಧಾಕರ (ಸಂ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, 2012
5. ಕರ್ನಾಟಕ ಸಂಸ್ಕೃತಿ ಸಂಶೋಧನೆ ಹರಿದಾಸರ ಪರಂಪರೆ, ಉಷಾ ಸಾಹಿತ್ಯ ಮಾಲೆ ಮೈಸೂರು, ಕಪಟರಾಳ ಕೃಷ್ಣರಾವ್. 1970
6. ವಚನ ಸಾಹಿತ್ಯ ಮಾನವೀಯ ಮೌಲ್ಯಗಳು ಮೂಲ, ಡಾ.ಸಿದ್ದಯ್ಯ ಪುರಾಣಿಕ, ಅನು – ಪ್ರೊ ಎ. ಎಸ್. ನಂಜುಂಡಸ್ವಾಮಿ ಭಾರತೀಯ ವಿದ್ಯಾಭವನ ಬೆಂಗಳೂರು–560001